**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಸಹ ಸಂಶೋಧನಾ ನಿರ್ದೇಶಕರು** **ಸಂಶೋಧನಾ ನಿರ್ದೇಶಕರ ಕಛೇರಿ**

**ಜಿಕೆವಿಕೆ, ಬೆಂಗಳೂರು–560065**

ಸಂಖ್ಯೆ: ಸಂ.ನಿ./ದಾಸ್ತಾವೇಜು/ವಾ.ಕಾ./2024–25 ದಿನಾಂಕ: 08.04.2024

## ಸುತ್ತೋಲೆ

ವಿಷಯ: 2024ನೇ ಸಾಲಿನ ವಲಯ–5ರ, **ವಲಯ ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ವಾರ್ಷಿಕ ಕಾರ್ಯಾಗಾರದ ದಿನಾಂಕ ಬದಲಾವಣೆ** ಕುರಿತು

* * * *

ವಲಯ 5 ರ (ಪೂರ್ವ ಒಣ ವಲಯ) ವಲಯ ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ವಾರ್ಷಿಕ ಕಾರ್ಯಗಾರವನ್ನು **18 ಮತ್ತು 19ನೇ ಏಪ್ರಿಲ್, 2024** ರಂದು ಆಯೋಜಿಸಲು ತೀರ್ಮಾನಿಸಲಾಗಿತ್ತು ಕಾರಣಾಂತರಗಳಿಂದ ಸದರಿ ಕಾರ್ಯಾಗಾರವನ್ನು ಮುಂದೂಡಲಾಗಿದ್ದು, **23 ಮತ್ತು 24ನೇ ಏಪ್ರಿಲ್, 2024** ರಂದು **ಬೆಂಗಳೂರಿನ ಜಿ.ಕೆ.ವಿ.ಕೆ. ಆವರಣದ ಕೃಷಿ ಮಹಾವಿದ್ಯಾಲಯದ ಉತ್ತರ ಬ್ಲಾಕ್‌ನ ಸಭಾಂಗಣದಲ್ಲಿ** ಆಯೋಜಿಸಲು ತೀರ್ಮಾನಿಸಲಾಗಿದೆ. ಸದರಿ ಕಾರ್ಯಾಗಾರದಲ್ಲಿ ಕೆಳಕಂಡ ಅಂಶಗಳನ್ನು ಪರಿಶೀಲಿಸಿ, ಪರಿಗಣಿಸಿ ಮತ್ತು ಅನುಮೋದಿಸಲು ನಿರ್ಧರಿಸಲಾಗುತ್ತದೆ.

- ಕ್ಷೇತ್ರವಾರು ಸಮಸ್ಯೆಗಳು ಮತ್ತು 2023–24ರ ಕ್ಷೇತ್ರ ಪ್ರಯೋಗಗಳ ಫಲಿತಾಂಶಗಳು
- ಬಿಡುಗಡೆಗೆ ಶಿಫಾರಸ್ಸು ಮಾಡಲಾದ ನೂತನ ತಳಿಗಳು ಮತ್ತು ವಿವರ
- ಆಧುನಿಕ ಬೇಸಾಯ ಪದ್ಧತಿಗಳ ಕೈಪಿಡಿಗೆ (PoP) ಸೇರ್ಪಡಿಸಲು ಅಂಗೀಕರಿಸಲಾದ ನೂತನ ತಂತ್ರಜ್ಞಾನಗಳು ಹಾಗೂ ವಿವರ
- ತಂತ್ರಜ್ಞಾನಗಳ ವಾಣಿಜ್ಯೀಕರಣ (Commercialization) ಹಾಗೂ ಹಕ್ಕುಸ್ವಾಮ್ಯಪತ್ರಕ್ಕಾಗಿ (Patents) ಸಲ್ಲಿಸುವ ಪ್ರಸ್ತಾವನೆಗಳು
- 2023–24ರಲ್ಲಿ ಕೈಗೊಂಡ ಸಂಶೋಧನಾ ಪ್ರಯೋಗಗಳ ಫಲಿತಾಂಶಗಳು
- 2024–25ನೇ ಸಾಲಿಗೆ ಹೊಸ ಕ್ಷೇತ್ರ ಪ್ರಯೋಗಗಳ ಮತ್ತು ಬಹು ಕ್ಷೇತ್ರ ಪ್ರಯೋಗಗಳ (MLT) ಪ್ರಸ್ತಾವನೆಗಳು
- 2024–25ರ ನೂತನ ತಾಂತ್ರಿಕ ಕಾರ್ಯಕ್ರಮಗಳ ಪ್ರಸ್ತಾವನೆಗಳು
- ಉದ್ಭವಿತ ಸಮಸ್ಯೆಗಳು (Emerging Issues) ಮತ್ತು ಸಂಶೋಧನೆಯ ನೂತನ ಆಯಾಮಗಳು(Thrust Areas)

- ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ವಿಭಾಗದಲ್ಲಿ ಅನುಷ್ಠಾನಗೊಂಡಿರುವ ಎಲ್ಲಾ ಸಂಶೋಧನಾ ಪ್ರಾಯೋಜನೆಗಳ ಫಲಿತಾಂಶ ಮತ್ತು ಸ್ನಾತಕೋತ್ತರ ಸಂಶೋಧನೆಯ ಪ್ರಮುಖ ಫಲಿತಾಂಶಗಳ ಸಂಕ್ಷಿಪ್ತ ವರದಿಯನ್ನು ಶ್ರವಣ ದೃಶ್ಯ ಮಾಹಿತಿ ರೂಪದಲ್ಲಿ (ಪಿಪಿಟಿ) ಮಂಡಿಸಲು ಕೋರಲಾಗಿದೆ. (ವಲಯ–5ಕ್ಕೆ ಸಂಬಂಧಿಸಿದ ವರದಿಯನ್ನು ಮಾತ್ರ ಕಳುಹಿಸತಕ್ಕದ್ದು).

M. S.

ಸಹ ಸಂಶೋಧನಾ ನಿರ್ದೇಶಕರು

**ಸಹ ಸಂಶೋಧನಾ ನಿರ್ದೇಶಕರು** (ಕೇಂದ್ರ ಸ್ಥಾನ)
**ಸಂಶೋಧನಾ ನಿರ್ದೇಶನಾಲಯ**
**ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065**